ಮಂಟವ್ವ... ಎದಿ ಎದೀ ಬಡ್ಕೊಂಡು ಅಳಾಕ ಹತ್ತಿದ್ಲು. ಪಾರವ್ವನೂ ಅಡ್ಡಗಟ್ಟಿ ನಿಂತಳು. ಬ್ಯಾಡ ಹಬ್ಬದಾಗ ಅವರೇನರ ಜಗಳಾಡಿ ಸಾಯಲಿ, ನೀ ಮನ್ಯಾಗಿರು ಅಂತ.

ಬಸಪ್ಪನ ಗುಟುರು ಕ್ಯಾಕರಿಕೆ ಹೆಚ್ಚಾಗೂತ್ಲೆ ಫಕೀರಪ್ಪನೂ 'ಇವನವ್ವನss' ಅನ್ನೋತ ಬಾರ್ಕೋಲ್ ತಗೊಂಡು ಹೊಂಟ. ಅದ ಹೊತ್ತೀಗಿ ಅಡ್ಡ ಗಟ್ಟಿದ ಪಾರವ್ವಗ ಸಿಟ್ಟಿನ್ಯಾಗ ರಪ ರಪಾ ಬಾರಿಸಾಕ ಹತ್ತಿದ.

"ಅಯ್ಯೋ... ನನ್ ಉಳಿಸರೇss ಎಂದು ಗಂಟಲಾ ಹರ್ಕೊಂಡ ಪಾರವ್ವಗ ಎಲ್ಲಿ ಓಡಿಹೋಗ್ಬೇಕಂತ ತಿಳಿಲಿಲ್ಲ. ಬಾಜೂ ಗಿರಣಿನೂ ಬಂದಾಗಿತ್ತು. ಹಿತ್ಲಾಗ ಹೋಗ್ಲೋ ಮುಂಚ್ಯಾಗ ಹೋಗ್ಲೋ ಗೊತ್ತಾಗದ ಅಕೀಗ ಒಮ್ಮೆಲೆ ಆಚಾರ್ರು ನೆನಪಾಗಿಬಿಟ್ರು.

ನನ್ನ ಬದಕಸ್ರೀ ಆಚಾರ್ರ... ಅನ್ನೋತ ತಂಗೆನಾಗಾಕ್ಕತ್ತೇತಿ ಅದರ ಪರಿಣಾಮ ಏನಾಗಬೊದು ಅಂತಾ ಸ್ವಲಪಾನೂ ಯೋಚಿಸ್ದ ಪಾರವ್ವ ದುಡುದುಡು ಅಟ್ವ ಹತ್ತಿಹೋಗಿ ಹಬ್ಬದ ಜಗಳಾ ಬಿಡಂತ... ತಣ್ಣಗ ಕುಂತ ಆಚಾರ್ರನ್ನ ಗಟ್ಟಿಯಾಗಿ ಅಪ್ಕೊಂಡ್ ಬಿಟ್ಟಳು. ತಬ್ಬಿಬ್ಬಾಗಿ ಹೆದರಿಹೋದ್ ಆಚಾರ್ರು – ಏನಾತ್ ಪಾರವ್ವ... ಏನಾತ್ ಪಾರವ್ವ ಅಂದ್ರೂ ಅಕೀ ಬಾಯಿಕಟ್ಟಿಹೋಗಿತ್ತು. ಮೈಯಾಗೆಲ್ಲ ಬಾರ್ಕೋಲಿನ ಬಾಸುಂಡೆಗಳು... ಮೂಗಬಟ್ಟ ಕಿತ್ತೋಗಿ ರಕ್ತ ಬರಾಕತ್ತಿತ್ತು. ಕೂದ್ಲಾ ಕೆದರಿ... ಕಣ್ಣೀರು ಹರಿತಿತ್ತು.

ಶ್ರೀಪಾದಾಚಾರ್ರು ಹೊರಗ ಏನ್ ಆಗೇದಂತ ಎದ್ ನೋಡ್ಬೇಕು. ಅಕೀ ಕಣ್ಣೀರೊರೆಸಿ – ಸಮಾಧಾನಾ ಮಾಡ್ಕೋ... ನಾ ನೋಡ್ತೆನಿ ಅನ್ನಬೇಕು, ಅಷ್ಟರಾಗ ಈರಭದ್ರನಂಗ ಉಗ್ರರೂಪಿ ಫಕೀರಪ್ಪ ಅಟ್ವಾ ಹತ್ತೀ ಬಂದs ಬಿಟ್ವಾ...

"ಯಾಕಲೇ ಚಿನಾಲಿ. ಇದ್ಯಾವಾಗಿಂದ ನಡದೈತಿ ನಿಂದು. ನಾ ಹೊಡಿತೇನಂತ ಮಿಂಡನ್ ಮಗ್ಗಲಾಕ ಬಂದ್ಯಾ ಭೋಸುಡಿ ಕೇ" ಅನ್ನುತ್ತ ಕಿರಿಚಾಡಕೋಂತ್ ಪಾರಮ್ಮನ ಜುಟ್ಟು ಹಿಡದು ದರದರ ನಾಯಿ ಎಳಕೊಂಡ್ ಹೋದಂಗ ಹ್ವಾದ.

ಅವತ್ತ ಕಂಡ ಪಾರಮ್ಮನ ಆ ದೈನಾಸಿ ಮುಖ ಶ್ರೀಪಾದಾಚಾರ್ಯರ್ರಗ ಮತ್ಯಾವತ್ತೂ ಕಾಣಿಸಿಕೊಳ್ಳಿಲ್ಲ. ಅಕೀನ್ ಕತ್ಲ ಕ್ವಾಣ್ಯಾಗ ಹಾಕಿಬಿಟ್ಟು ಮಂಟಮ್ಮ.

★★★

ಪಾರವ್ವ ಇಡೀ ಓಣ್ಯಾಗ, ಜಾತಿ ಮಂದೀ ಬಾಯಾಗ ಹಾದರಗಿತ್ತಿ. ಆಚಾರ್ರಿ ಮಿಂಡಿ, ರಂಡಿ ಎಲ್ಲ ಆಗಿಹ್ವಾದ್ಲು. 'ಹಾರೂರಂವ ಇಟ್ಟುಕೊಂಡಾಳಂತ' ಅನ್ನೂದಷ್ಟ ಆತು. ಯಾರೂ ಮುಂದಿನ ಹತ್ತ ವರ್ಸದ ತನಕಾ ಅದಾಳೋ ಸತ್ತಾಳೋ ಸತೇಕ ನೋಡಲಿಲ್ಲ. ಮನೀ ಹೊರಗೂ ಬಿಡಲಿಲ್ಲ. ಮಂಟವ್ವಾ ಸಾಯೂಮಟ ಅಕೀಗೆ ಮುಕ್ತೀ ಸಿಗಲಿಲ್ಲ. ಹೆಣ್ಣಿಗೆ ಹೆಣ್ಣ ಶತ್ರೂವನ್ನೂದು ಖರೇನ ಅನಿಸ್ತು. ರಾತ್ರಿ ಮಂಟವ್ವ ಸಂಡಾಸಕ್ಕಂತ ತಾನ ಪಾರಮ್ಮನ ಬಣವಿ ಹಂತೇಕ ಕರ್ಕೊಂಡ್ ಹೋಗತಿದ್ಲು.

ಶ್ರೀಪಾದಾಚಾರ್ರು ಒಳಗೊಳಗ ಕೊರಗಿದರು. ಮರುಗಿದ್ರು. ಆದರೂ ಧೈರ್ಯಾ ಮಾಡಿ... ''ಯಾಕ ಆ ಹೆಣಮಗಳಿಗಿ ತ್ರಾಸ್ ಕೊಡ್ತೀರಿ. ಅಕೀ ಯಾವ ತಪ್ಪೂ ಮಾಡಿಲ್ಲ ಬೇ'' ಅಂತಾ ಮಂಟವ್ವಗ ಹೇಳಬೇಕು ಅನಕೊಂಡ್ರೂ ಈಗಾಗಲೇ ಹೆಸರಿಗೆ ಕಳಂಕಾ ಹಚ್ಚಿಬಿಟ್ಟಾವ್ರ ಜೊತಿ ಏನ ಮಾತು ಅಂತಾ ಸುಮ್ಮಗಾದ್ರು. ಪುಟ್ಟಜ್ಜೀ ಅಂತೂ ಈ ಓಣ್ಯಾಗ ಇರೂದ ಬ್ಯಾಡ ನಮ್ಮ ಹತ್ತಿಕೊಳ್ಳದ ಮನೀಗೆ ಹೋಗೂಣ ನಡೀ ಅಂತಾ ಪಟ್ಟುಹಿಡದ ಪದ್ದೀ ಕಾಲೇಜಿಗೂ ಹಂತೇಕ ಆಗ್ತದ ಅಂತೇಳಿ ಮನೀನ ಖಾಲಿ ಮಾಡಿದ್ರು.